# ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
## ದಸರಾ ಕ್ರೀಡಾಕೂಟ

2014–15ನೇ ಸಾಲಿನ ದಸರಾ ಕ್ರೀಡಾಕೂಟದ ಸ್ಪರ್ಧೆಗಳನ್ನು ಪುರುಷ ಹಾಗೂ ಮಹಿಳೆಯರಿಗಾಗಿ ತಾಲ್ಲೂಕು, ಜಿಲ್ಲಾ, ವಿಭಾಗ ಹಾಗೂ ರಾಜ್ಯ ಮಟ್ಟದಲ್ಲಿ ಪ್ರತಿ ವರ್ಷ ಏರ್ಪಡಿಸಲಾಗುವುದು.

ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಏರ್ಪಡಿಸಲು ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ ಇವರ ಅವಗಾಹನೆಗಾಗಿ ತಂದು ಅವರ ಸಲಹೆಗಳನ್ನು ಪಡೆದು ಸಮಿತಿಗಳನ್ನು ರಚಿಸಿಕೊಂಡು ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು.

ಇದೇ ರೀತಿಯಲ್ಲಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳನ್ನು ಏರ್ಪಡಿಸುವಾಗ ಸಂಬಂಧಪಟ್ಟ ವಿಭಾಗದ ಕೇಂದ್ರ ಸ್ಥಾನದಲ್ಲಿ ಸಂಬಂಧಪಟ್ಟ ವಿಭಾಗದ ಕೇಂದ್ರ ಸ್ಥಾನದ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಅವರ ಮಾರ್ಗದರ್ಶನ, ಸಲಹೆಗಳನ್ನು ಪಡೆದುಕೊಂಡು ಅವಶ್ಯಕತೆ ಇದ್ದಲ್ಲಿ ಸಮಿತಿ ರಚಿಸಿಕೊಂಡು ವಿಭಾಗ ಮಟ್ಟದ ಕ್ರೀಡಾಕೂಟದ ಸ್ಪರ್ಧೆಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಏರ್ಪಡಿಸಲಾಗುವುದು. ಇದಕ್ಕಾಗಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಬೆಳಗಾಂ, ಗುಲ್ಬರ್ಗಾ ವಿಭಾಗಗಳಿಗೆ ತಲಾ ರೂ. 1.50 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

**ಸ್ಪರ್ಧೆಗಳ ವಿವರ**

**ಪುರುಷರಿಗೆ**:– ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್, ಈಜು, ವಾಲಿಬಾಲ್, ಕಬ್ಬಡಿ, ಖೋ–ಖೋ, ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಹ್ಯಾಂಡ್‌ಬಾಲ್, ಟೇಬಲ್ ಟೆನ್ನಿಸ್, ಟೆನ್ನಿಸ್, ಫುಟ್‌ಬಾಲ್, ಬಾಲ್ ಬ್ಯಾಡ್ಮಿಂಟನ್, ಹಾಕಿ, ಥ್ರೋಬಾಲ್, ನೆಟ್‌ಬಾಲ್.

**ಅಥ್ಲೆಟಿಕ್ ಸ್ಪರ್ಧೆಗಳು**:– 100 ಮೀ, 200 ಮೀ, 400 ಮೀ, 800 ಮೀ, 1500 ಮೀ, 5000 ಮೀ ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 110 ಮೀ ಹರ್ಡಲ್ಸ್, 4X100 ಮೀ ರಿಲೇ, 4X400 ಮೀ ರಿಲೇ.

**ಮಹಿಳೆಯರಿಗೆ**:– ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್ಸ್, ಈಜು, ವಾಲಿಬಾಲ್, ಕಬ್ಬಡಿ, ಖೋ–ಖೋ, ಹಾಕಿ, ಬ್ಯಾಸ್ಕೆಟ್‌ಬಾಲ್, ಬ್ಯಾಡ್ಮಿಂಟನ್, ಹ್ಯಾಂಡ್‌ಬಾಲ್, ಟೇಬಲ್ ಟೆನ್ನಿಸ್, ಟೆನ್ನಿಸ್, ಬಾಲ್ ಬ್ಯಾಡ್ಮಿಂಟನ್, ನೆಟ್‌ಬಾಲ್, ಥ್ರೋಬಾಲ್.

**ಅಥ್ಲೆಟಿಕ್ ಸ್ಪರ್ಧೆಗಳು**:– 100 ಮೀ, 200 ಮೀ, 400 ಮೀ, 800 ಮೀ, 1500 ಮೀ, 3000 ಮೀ ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 100 ಮೀ ಹರ್ಡಲ್ಸ್, 4X100 ಮೀ ರಿಲೇ, 4X400 ಮೀ ರಿಲೇ.

**ಈಜು ಪುರುಷರಿಗೆ ಮತ್ತು ಮಹಿಳೆಯರಿಗೆ**

1)100, 200, 400 ಮೀ-ಫ್ರೀ ಸ್ಟೈಲ್, 2)100, 200-ಬ್ಯಾಕ್ ಸ್ಟ್ರೋಕ್, 3)100, 200 ಮೀ-ಬ್ರೆಸ್ಟ್, 4)100 ಮೀ-ಬಟರ್ ಫ್ಲೈ, 5)200 ಮೀ-ಇಂಡುವಿಜಯಲ್ ಮಿಡ್ಲೆ, 6)4X100 ಮೀ-ಫ್ರೀ ಸ್ಟೈಲ್ ರಿಲೇ.

1. ಹಾಕಿ, ಬ್ಯಾಸ್ಕೆಟ್‌ಬಾಲ್ ಹಾಗೂ ಟೇಬಲ್ ಟೆನ್ನಿಸ್ ಸ್ಪರ್ಧೆಗಳನ್ನು (ಪುರುಷರಿಗೆ ಮತ್ತು ಮಹಿಳೆಯರಿಗೆ) ಜಿಲ್ಲಾ ಮಟ್ಟದಿಂದ ಏರ್ಪಡಿಸುವುದು.

2. ಈಜು, ಹ್ಯಾಂಡ್‌ಬಾಲ್, ಜಿಮ್ನಾಸ್ಟಿಕ್ಸ್, ಟೆನ್ನಿಸ್, ನೆಟ್‌ಬಾಲ್, ಥ್ರೋಬಾಲ್ ಹಾಗೂ ಶಟಲ್ ಬ್ಯಾಡ್ಮಿಂಟನ್ ಈ
   ಕ್ರೀಡೆಗಳಲ್ಲಿ ಸ್ಪರ್ಧಿಗಳನ್ನು ಆಯ್ಕೆ ಮಾಡಿ ವಿಭಾಗ ಮಟ್ಟದ ಸ್ಪರ್ಧೆಗಳಿಗೆ ಕಳುಹಿಸಿಕೊಡತಕ್ಕದ್ದು.

**<u>3. ವಿಭಾಗ ಮಟ್ಟದಿಂದ ರಾಜ್ಯ ಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳ ವಿವರ</u>**

1.ವಿಭಾಗ ಮಟ್ಟದಿಂದ ರಾಜ್ಯ ಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳ ವಿವರಗಳನ್ನು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ವಿಭಾಗ, ಇವರು ಅವರ ಪತ್ರದಲ್ಲಿ ತಿಳಿಸುವರು. ವಿಭಾಗದಿಂದ ವಿಜೇತರನ್ನು ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳಿಗೆ ಕಳುಹಿಸಿಕೊಡುವ ಜವಾಬ್ದಾರಿ ಸಂಬಂಧಪಟ್ಟ (ಗುಲ್ಬರ್ಗಾ, ಬೆಳಗಾವಿ, ಮೈಸೂರು, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ) ಸಹಾಯಕ ನಿರ್ದೇಶಕರುಗಳದ್ದಾಗಿರುತ್ತದೆ.

2.ವಿಭಾಗ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಗಳಿಸಿದವರನ್ನು ಮತ್ತು ಗುಂಪು ಸ್ಪರ್ಧೆಗಳಲ್ಲಿ (ರಿಲೇ ಸಹಿತ) ಒಂದು ತಂಡವನ್ನು ಮಾತ್ರ ರಾಜ್ಯ ಮಟ್ಟದ ಸ್ಪರ್ಧೆಗಳಿಗೆ ಕಳುಹಿಸಿಕೊಡತಕ್ಕದ್ದು. ವಿವಿಧ ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯದಲ್ಲಿ ವಾಸಿಸುವ ಕ್ರೀಡಾಪಟುಗಳು ಮಾತ್ರ ಅರ್ಹರಿರುತ್ತಾರೆ.

3.ಕ್ರೀಡಾಕೂಟದಲ್ಲಿ ರಕ್ಷಣಾಪಡೆ, ಅರೆರಕ್ಷಣಾಪಡೆ ಸೇರಿದ ಕ್ರೀಡಾಪಟುಗಳು ಭಾಗವಹಿಸಲು ಅರ್ಹರಲ್ಲ.

4.ಒಬ್ಬ ಕ್ರೀಡಾಪಟು ಅಥವಾ ತಂಡ ಯಾವುದೇ ಜಿಲ್ಲೆಯಲ್ಲಿ ಒಂದು ಬಾರಿ ತಾಲ್ಲೂಕು ಅಥವಾ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ ನಂತರ ಬೇರೆ ಯಾವುದೇ ಜಿಲ್ಲೆಯ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಅವಕಾಶವಿಲ್ಲ. ಅಂತಹ ಪ್ರಕರಣವೇನಾದರೂ ದಾಖಲಾದಲ್ಲಿ ಅಥವಾ ಗಮನಕ್ಕೆ ಬಂದಲ್ಲಿ ತೀವ್ರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

5.ವಿಭಾಗ ಮಟ್ಟದ ವಿಜೇತರಿಗೆ ಹಿಂದಿನ ವರ್ಷದಲ್ಲಿ ಇರುವಂತೆ ಗುರುತಿನ ಚೀಟಿಯನ್ನು ಈ ಸಾಲಿನಲ್ಲಿ ನೀಡಬೇಕಾಗಿದ್ದು, ಆ ಗುರುತಿನ ಚೀಟಿಗಳನ್ನು ಸಂಬಂಧಪಟ್ಟ ವಿಭಾಗ ಮಟ್ಟದ ಕ್ರೀಡಾಕೂಟವನ್ನು ಸಂಘಟಿಸುವ ವಿಭಾಗದ ಸಹಾಯಕ ನಿರ್ದೇಶಕರುಗಳು ಅವುಗಳನ್ನು ಕ್ರಮ ಸಂಖ್ಯೆಯನ್ನು ಅಳವಡಿಸಿ ಮುದ್ರಿಸುವ ಜವಬ್ದಾರಿಯಾಗಿದ್ದು, ಅಲ್ಲಿಂದಲೇ ವಿತರಿಸಲು ತಿಳಿಸಲಾಗಿದೆ. ಗುರುತಿನ ಚೀಟಿಗೆ ಕ್ರಮ ಸಂಖ್ಯೆಯೊಂದಿಗೆ ಪ್ರತಿ ಸ್ಪರ್ಧಿಯಿಂದ 2 ಭಾವ ಚಿತ್ರಗಳನ್ನು ಪಡೆದು ಅಂಟಿಸಿ ವಿವರಗಳನ್ನು ತುಂಬಿ ವಿಭಾಗ ಮಟ್ಟದ ಫಲಿತಾಂಶವನ್ನು ಲಗತ್ತಿಸಿರುವ ನಮೂನೆಯಲ್ಲಿ ಸಂಬಂಧಪಟ್ಟ (ಗುಲ್ಬರ್ಗಾ, ಬೆಳಗಾವಿ, ಮೈಸೂರು, ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ) ಸಹಾಯಕ ನಿರ್ದೇಶಕರುಗಳು ದೃಢೀಕರಿಸಿ ಜಂಟಿ ನಿರ್ದೇಶಕರು (ಕ್ರೀಡೆ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿಗೆ ಫಲಿತಾಂಶ

ಪಟ್ಟಿಯನ್ನು ಮಾತ್ರ ಹಾಗೂ ಸಹಾಯಕ ನಿರ್ದೇಶಕರು, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ಗುರುತಿನ ಚೀಟಿಯೊಂದಿಗೆ ದ್ವಿಪ್ರತಿಗಳಲ್ಲಿ 5ನೇ ಸೆಪ್ಟೆಂಬರ್ 2014ರ ಒಳಗಾಗಿ ಕಳುಹಿಸಿಕೊಡುವುದು.

6. ವಿಭಾಗ ಮಟ್ಟದಿಂದ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಕ್ರೀಡಾಪಟುಗಳನ್ನು ಕಳುಹಿಸಿಕೊಡುವ ವಿವರ ಕೆಳಕಂಡಂತಿದೆ.

1. ಮೈಸೂರು ವಿಭಾಗ
2. ಬೆಂಗಳೂರು ನಗರ ವಿಭಾಗ (ಬೆಂಗಳೂರು ನಗರ ಜಿಲ್ಲೆ ಮಾತ್ರ)
3. ಬೆಳಗಾವಿ ವಿಭಾಗ
4. ಬೆಂಗಳೂರು ಗ್ರಾಮಾಂತರ ವಿಭಾಗ
5. ಗುಲ್ಬರ್ಗಾ ವಿಭಾಗ

ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳನ್ನು ಮಾತ್ರ ಆಯ್ಕೆ ಮಾಡುವುದು. (ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್, ಈಜು, ಟೇಬಲ್ ಟೆನ್ನಿಸ್ (ಸಿಂಗಲ್ಸ್), ಟೆನ್ನಿಸ್ (ಸಿಂಗಲ್ಸ್), ಬ್ಯಾಡ್ಮಿಂಟನ್ (ಸಿಂಗಲ್ಸ್).

| **ಕ್ರ.ಸಂ** | **ಕ್ರೀಡೆ** | **ಪುರುಷರು** | **ಮಹಿಳೆಯರು** |
|---|---|---|---|
| 1 | ಅಥ್ಲೆಟಿಕ್ಸ್ | 34 | 34 |
| 2 | ಜಿಮ್ನಾಸ್ಟಿಕ್ | 07 | 07 |
| 3 | ವಾಲಿಬಾಲ್ | 12 | 12 |
| 4 | ಕಬ್ಬಡಿ | 12 | 12 |
| 5 | ಹಾಕಿ | 16 | 16 |
| 6 | ಖೋ–ಖೋ | 12 | 12 |
| 7 | ಬ್ಯಾಡ್ಮಿಂಟನ್ (ಸಿಂಗಲ್ಸ್ & ಡಬಲ್ಸ್) | 04 | 04 |
| 8 | ಬ್ಯಾಸ್ಕೆಟ್‌ಬಾಲ್ | 12 | 12 |
| 9 | ಹ್ಯಾಂಡ್‌ಬಾಲ್ | 12 | 12 |
| 10 | ಟೇಬಲ್ ಟೆನ್ನಿಸ್ (ಸಿಂಗಲ್ಸ್ & ಡಬಲ್ಸ್) | 04 | 04 |
| 11 | ಟೆನ್ನಿಸ್ (ಸಿಂಗಲ್ಸ್ & ಡಬಲ್ಸ್) | 04 | 04 |
| 12 | ಫುಟ್‌ಬಾಲ್ | 16 | – |
| 13 | ಬಾಲ್ ಬ್ಯಾಡ್ಮಿಂಟನ್ | 10 | 10 |
| 14 | ಈಜು | 12 | 12 |
| 15 | ಥ್ರೋ ಬಾಲ್ | 12 | 12 |
| 16 | ನೆಟ್ ಬಾಲ್ | 12 | 12 |
| **ಒಟ್ಟು** | | **191** | **175** |

ಈ ಸ್ಪರ್ಧೆಯಿಂದ ಮಹಿಳಾ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ರಾಷ್ಟ್ರೀಯ ಮಹಿಳಾ ಕ್ರೀಡಾ ಕೂಟಕ್ಕೆ ಕಳುಹಿಸಿಕೊಡಲಾಗುವುದು. ಮಹಿಳಾ ತಂಡಗಳ ಆಯ್ಕೆ ಬಗ್ಗೆ ಕ್ರೀಡಾಪಟುಗಳಿಗೆ ಹೆಚ್ಚಿನ ಮಾಹಿತಿ ಒದಗಿಸಲು ತಿಳಿಸಿದೆ.

ಆಯಾ ವಿಭಾಗದ ಸಹಾಯಕ ನಿರ್ದೇಶಕರು ತಂಡದ ಮುಖ್ಯ ವ್ಯವಸ್ಥಾಪಕರಾಗಿದ್ದು, ತಮ್ಮ ವಿಭಾಗಕ್ಕೆ ಸಂಬಂಧಿಸಿದ ಗುರುತಿನ ಚೀಟಿ ಮತ್ತು ದಾಖಲೆಗಳನ್ನು ಸಹಾಯಕ ನಿರ್ದೇಶಕರು, ಮೈಸೂರು ಇವರಿಗೆ ನಿಗಧಿತ ಅವಧಿಯೊಳಗಾಗಿ ಕಳುಹಿಸುವುದು. ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಆಯಾ ವಿಭಾಗದ ತಂಡದ ವ್ಯವಸ್ಥಾಪಕರುಗಳು (ಮ್ಯಾನೇಜರ್) ಸೂಚಿಸಿದ ದಿನಾಂಕದಂದು ಮೈಸೂರಿನ ನಂಜರಾಜ ಬಹುದ್ದೂರ್ ಛತ್ರದಲ್ಲಿ ವರದಿ ಮಾಡಿಕೊಂಡು ಅವರಿಗೆ ಹಂಚಿಕೆಯಾಗಿರುವ ವಸತಿ ಸ್ಥಳವನ್ನು ತಮ್ಮ ಸುಪರ್ದಿಗೆ ಪಡೆದು ಯಾವುದೇ ಗಲಾಟೆ ಅಥವಾ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳತಕ್ಕದ್ದು. ಈ ಬಗ್ಗೆ ವಿವರಗಳನ್ನು ರಾಜ್ಯ ಮಟ್ಟದ ಕ್ರೀಡಾ ವ್ಯವಸ್ಥಾಪಕ ಸಮಿತಿಯಿಂದ ಪಡೆದು ತಿಳಿಸಲಾಗುವುದು. ಈ ಸ್ಪರ್ಧೆಯಿಂದ ಮಹಿಳಾ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ರಾಷ್ಟ್ರೀಯ ಮಹಿಳಾ ಕ್ರೀಡಾ ಕೂಟಕ್ಕೆ ಕಳುಹಿಸಿಕೊಡಲಾಗುವುದು. ‘1ಮಹಿಳಾ ತಂಡಗಳ ಆಯ್ಕೆ ಬಗ್ಗೆ ಕ್ರೀಡಾಪಟುಗಳಿಗೆ ಹೆಚ್ಚಿನ ಮಾಹಿತಿಯನ್ನು ಸಂಬಂಧಪಟ್ಟ ಜಿಲ್ಲೆಗಳ ಉಪ/ಸಹಾಯಕ ನಿರ್ದೇಶಕರು ತಿಳಿಸುವರು.

**ರಾಜ್ಯ ಮಟ್ಟದಲ್ಲಿ ದೇಹಾಧಾರ್ಢ್ಯ ಸ್ಪರ್ಧೆಯಲ್ಲಿನ ಎತ್ತರ ಹಾಗೂ ತೂಕ ವಿಭಾಗದಲ್ಲಿ ಪ್ರತ್ಯೇಕವಾಗಿ ಹಾಗೂ ನೇರವಾಗಿ ಮೈಸೂರಿನಲ್ಲಿ ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಸಂಘಟಿಸಲಾಗುವುದು.**

ಪ್ರತಿ ವರ್ಷ ಮೇಲ್ಕಂಡ ಸ್ಪರ್ಧೆಗಳ ವಿಜೇತರಿಗೆ ನೀಡುವ ನಗದು ಬಹುಮಾನ ವಿತರಿಸಲು ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು ಇವರಿಂದ ಹಣವನ್ನು ಬಿಡುಗಡೆ ಮಾಡಲಾಗುವುದು. ಸದರಿ ಕ್ರೀಡಾಕೂಟಗಳು ಮುಗಿದ ತಕ್ಷಣ ಲೆಕ್ಕ ಪತ್ರಗಳನ್ನು ಕರ್ನಾಟಕ ಕ್ರೀಡಾ ಪ್ರಾಧಿಕಾರಕ್ಕೆ ಕಳುಹಿಸಿಕೊಡತಕ್ಕದ್ದು. ತಪ್ಪಿದಲ್ಲಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

**ಸಾಹಸ ಕ್ರೀಡೆಗಳು:**

**ಜಲಸಾಹಸ ಕ್ರೀಡೆಗಳು**: ಜೆಟ್ ಸ್ಕೀಯಿಂಗ್, ಬನಾನಾ ರೈಡ್, ಕಯಾಕಿಂಗ್, ವಿಂಡ್ ಸರ್ಫಿಂಗ್, ಮತ್ತಿತರ ಕ್ರೀಡೆಗಳನ್ನು 6 ದಿನಗಳ ಕಾಲ ಸಾರ್ವಜನಿಕರಿಗಾಗಿ ರಿಯಾಯಿತಿ ದರದಲ್ಲಿ ಆಯೋಜಿಸಲಾಗುವುದು

ಕ್ರೀಡಾರೋಹಣ ತರಬೇತಿಯನ್ನು 4 ದಿನಗಳ ಕಾಲ ಆಯೋಜಿಸಿ ಕೊನೆಯ 2 ದಿನಗಳಲ್ಲಿ ರಾಜ್ಯ ಮಟ್ಟದದ ಸ್ಪರ್ಧೆಗಳನ್ನು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿನ ಕೃತಕ ಗೋಡೆಯಲ್ಲಿ ಆಯೋಜಿಸಲಾಗುವುದು.

**ಮ್ಯಾರಾಥಾನ್**

ಹಾಫ್ ಮ್ಯಾರಾಥಾನ್ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು. ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಕ್ರೀಡಾಪಟುಗಳು ಸೂಚಿಸಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಇವರಲ್ಲಿ ವರದಿ ಮಾಡಿಕೊಳ್ಳತಕ್ಕದ್ದು.

ಹಾಫ್ ಮ್ಯರಾಥಾನ್ ಸ್ಪರ್ಧೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಬಹುಮಾನ ನೀಡಲಾಗುವುದು. ಈ ಸ್ಪರ್ಧೆಗಳಲ್ಲಿ ಭಾಗವಹಿಸುವ ಸ್ಪರ್ಧಾಳುಗಳಿಗೆ ವಸತಿ ಸೌಕರ್ಯವನ್ನು ರಾಜ್ಯ ಮಟ್ಟದ ಕ್ರೀಡಾ ವ್ಯವಸ್ಥಾಪಕ ಸಮಿತಿಯಿಂದ ಮಾಡಲಾಗುವುದು.

.

ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ನೀಡುವ ನಗದು ಬಹುಮಾನಗಳ ವಿವರ: (ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 52 ಯುಸೇಕ್ರೀ 08 ದಿನಾಂಕ: 19/8/2008)

1. ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ನಗರ ಮತ್ತು ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಪದಕ ಪಡೆದ ಕ್ರೀಡಾಪಟುಗಳಿಗೆ ಈ ಕೆಳಕಂಡಂತೆ ನಗದು ಪುರಸ್ಕಾರ ನೀಡಲಾಗುವುದು

| | ವೈಯುಕ್ತಿಕ ಕ್ರೀಡೆಗಳು | ಗುಂಪು ಕ್ರೀಡೆಗಳು |
|---|---|---|
| ಚಿನ್ನ | ರೂ. 5000–00 | ರೂ. 2000–00 |
| ಬೆಳ್ಳಿ | ರೂ. 3000–00 | ರೂ. 1500–00 |
| ಕಂಚು | ರೂ. 1500–00 | ರೂ. 1000–00 |

2. ದಸರಾ ಕ್ರೀಡಾಕೂಟದಲ್ಲಿ ದಾಖಲೆಯನ್ನು ಮುರಿಯುವವರಿಗೆ ತಲಾ ರೂ. 10,000/–ಗಳನ್ನು ಮತ್ತು ದಸರಾ ರತ್ನ ಪ್ರಶಸ್ತಿ ಪಡೆದವರಿಗೆ ರೂ. 10,000/–ಗಳನ್ನು ನೀಡಲಾಗುವುದು

3. ಸಾಹಸ ಕ್ರೀಡೆಗಳಲ್ಲಿ (6 ವಿಭಾಗಗಳಲ್ಲಿ) ಭಾಗವಹಿಸಿ ಪದಕ ಪಡೆಯುವ ಕ್ರೀಡಾಪಟುಗಳಿಗೆ ಈ ಕೆಳಕಂಡಂತೆ ನಗದು ಪುರಸ್ಕಾರ ಹಾಗೂ ವೈಟ್‌ಲಿಫ್ಟಿಂಗ್ ಪವರ್‌ಲಿಫ್ಟಿಂಗ್ 2 ವಿಭಾಗಗಳಲ್ಲಿ (ತೂಕ ಮತ್ತು ಎತ್ತರ ವಿಭಾಗ) ದೇಹದಾರ್ಢ್ಯ ಸ್ಪರ್ಧೆಯ ವಿಜೇತರಿಗೂ ಸಹ ನಗದು ಪುರಸ್ಕಾರವನ್ನು ಈ ಕೆಳಕಂಡಂತೆ ನೀಡಲಾಗುವುದು.

| | |
|---|---|
| ಚಿನ್ನ | ರೂ. 2000–00 |
| ಬೆಳ್ಳಿ | ರೂ. 1500–00 |
| ಕಂಚು | ರೂ. 1000–00 |

4. ಸೈಕ್ಲೋಥಾನ್ (100 ಕಿ.ಮೀ ಗುಡ್ಡಗಾಡು) ಸ್ಪರ್ಧೆಯಲ್ಲಿ ಭಾಗವಹಿಸಿ, 1ನೇ ಸ್ಥಾನದಿಂದ 10ನೇ ಸ್ಥಾನವನ್ನು ಪಡೆಯುವ ಪುರುಷ ಮತ್ತು ಮಹಿಳಾ ಸ್ಪರ್ಧಿಗಳಿಗೆ ಈ ಕೆಳಕಂಡಂತೆ ನಗದು ಪುರಸ್ಕಾರವನ್ನು ನೀಡಲಾಗುವುದು

| | |
|---|---|
| ಮೊದಲನೇ ಸ್ಥಾನ– ರೂ. 25000–00 | ಎರಡನೇ ಸ್ಥಾನ– ರೂ. 20000–00 |
| ಮೂರನೇ ಸ್ಥಾನ– ರೂ. 15000–00 | ನಾಲ್ಕನೇ ಸ್ಥಾನ– ರೂ. 10000–00 |
| ಐದನೇ ಸ್ಥಾನ– ರೂ. 5000–00 | ಆರನೇ ಸ್ಥಾನ– ರೂ. 4000–00 |
| ಏಳನೇ ಸ್ಥಾನ–ರೂ. 3000–00 | ಎಂಟನೇ ಸ್ಥಾನ– ರೂ. 2000–00 |
| ಒಂಭತ್ತನೇ ಸ್ಥಾನ– ರೂ. 2000–00 | ಹತ್ತನೇ ಸ್ಥಾನ– ರೂ. 2000–00 |

4. ಮ್ಯಾರಾಥಾನ್ (21.5 ಕಿ.ಮೀ) ಸ್ಪರ್ಧೆಯಲ್ಲಿ ಭಾಗವಹಿಸಿದ 1ನೇ ಸ್ಥಾನದಿಂದ 10ನೇ ಸ್ಥಾನ ಪಡೆಯುವ ಪುರುಷ ಮತ್ತು ಮಹಿಳಾ ಸ್ಪರ್ಧಿಗಳಿಗೆ ಈ ಕೆಳಕಂಡಂತೆ ನಗದು ಪುರಸ್ಕಾರವನ್ನು ನೀಡಲಾಗುವುದು.

| | |
|---|---|
| ಮೊದಲನೇ ಸ್ಥಾನ– ರೂ. 40000–00 | ಎರಡನೇ ಸ್ಥಾನ– ರೂ. 35000–00 |

| | |
|---|---|
| ಮೂರನೇ ಸ್ಥಾನ– ರೂ. 30000–00 | ನಾಲ್ಕನೇ ಸ್ಥಾನ– ರೂ. 25000–00 |
| ಐದನೇ ಸ್ಥಾನ– ರೂ. 20000–00 | ಆರನೇ ಸ್ಥಾನ– ರೂ. 15000–00 |
| ಏಳನೇ ಸ್ಥಾನ–ರೂ. 10000–00 | ಎಂಟನೇ ಸ್ಥಾನ– ರೂ. 5000–00 |
| ಒಂಭತ್ತನೇ ಸ್ಥಾನ– ರೂ. 5000–00 | ಹತ್ತನೇ ಸ್ಥಾನ– ರೂ. 5000–00 |

ಹೆಚ್ಚಿನ ವಿವರಗಳಿಗೆ ಸಂಬಂದಪಟ್ಟ ಜಿಲ್ಲೆಗಳ ಉಪ/ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದಾಗಿದೆ.

www.karnatakayouthportal.in ಸಂಪರ್ಕಿಸುವುದು.